ಯಜಮಾನರು. ಊರ ಯಾವುದೇ ಸಾಮಾಜಿಕ ಕಾರ್ಯಗಳು ಇವರಿಲ್ಲದೇ ನಡೆಯದು. ಅಂತೆಯೇ, ಈ ವರೆಗೆ ಇವರ ಯಾವ ಚಟುವಟಿಕೆಗಳನ್ನೂ ಇಲ್ಲಿನ ಜನ ಪ್ರಶ್ನಿಸಿಲ್ಲ. ಬಹುಶಃ ಅವರಿಗೆ ಈ ಬಗ್ಗೆ ಯೋಚಿಸಲು ಪುರುಸೊತ್ತಿಲ್ಲ. ಅವರ ಈ 'ಪ್ರಶ್ನಾತೀತ' ವ್ಯಕ್ತಿತ್ವವನ್ನು ಒಪ್ಪಿಕೊಂಡ ಈ ಜನ ಬಾಯಿಮುಚ್ಚಿಕೊಂಡೇ ದಿನ ಕಳೆದಿದ್ದಾರೆ. ಕ್ಷಣಕ್ಷಣಕ್ಕೆ ಬದುಕಿನ ಸಮಸ್ಯೆಗಳು ಕಾಡುವಾಗ ಇವರಿಗೆ ಯೋಚಿಸಲು ಸಮಯವಿಲ್ಲ.

ಹಾಗೆಂದು ಪಂಚಾಯತದ ಇತರ ಸದಸ್ಯರು ಎಲ್ಲಿದ್ದಾರೆ ಎಂದು ಕೇಳಿದರೆ ಉತ್ತರ: ಇದೇ ಊರಲ್ಲಿದ್ದಾರೆ. ಇವರ ಸದಸ್ಯತ್ವವನ್ನು ಈ ಊರಿನ ಜನ ಆಕ್ಷೇಪಿಸಿದವರಲ್ಲ. ಇವರು ಇದೇ ಜನರಿಂದ ಆಯ್ಕೆಯಾದವರು ಎಂದರೂ ತಪ್ಪಾಗದು. ಯಾಕೆಂದರೆ, ಈ ಊರಿನ ಚುನಾವಣೆಯ ಪದ್ಧತಿಯೇ ಹೀಗೆ. ಚೇರ್ಮನ್ನರು ಈ ಅವಧಿಗೆ ಇಂಥಿಂಥವರು ಸದಸ್ಯರು ಎಂದು ಮೊದಲೇ ಸೂಚಿಸಿರುತ್ತಾರೆ. ಜನ ಈ ಸೂಚನೆಯನ್ನು ಚಾಚೂ ತಪ್ಪದೇ ಒಪ್ಪಿಕೊಳ್ಳುತ್ತಾರೆ. ಈ ಎಲ್ಲ ಸದಸ್ಯರು ಅವಿರೋಧವಾಗಿ ಆಯ್ಕೆಯಾಗುತ್ತಾರೆ. ಈ ಸದಸ್ಯರಲ್ಲಿ ಯಾರಾದರೂ ಸತ್ತರೆ ಆ ಸ್ಥಳದಲ್ಲಿ ಅಧ್ಯಕ್ಷರು ಸೂಚಿಸಿದ ಇನ್ನೊಬ್ಬರು ಬರುತ್ತಾರೆ. ವ್ಯವಹಾರ ತುಂಬ ಸರಳ.

ಇನ್ನು ಊರ ವಿಷಯಕ್ಕೆ ಬರೋಣ. ಸುಮಾರು ಎರಡು ಚದರ ಕಿಲೋಮೀಟರ್‌ನಷ್ಟು ವ್ಯಾಪಿಸಿರುವ ಈ ಊರು ಟಿಪಿಕಲ್ ಊರಿನ ಹಾಗೆ ಕಿರಿದಾದ, ಅಡ್ಡತಿಡ್ಡ, ಅಷ್ಟಾವಕ್ರ ರಸ್ತೆಗಳಿಂದ ಕೂಡಿದೆ. ಇಪ್ಪತ್ತು ವರ್ಷಗಳ ಅವಧಿಯಲ್ಲಿ ಒಮ್ಮೆ ಮಾತ್ರ ಮುಖ್ಯ ರಸ್ತೆಗೆ ಡಾಮರು ಹಾಕಿಸಲಾಗಿದ್ದು ಇದೀಗ ಅಲ್ಲಲ್ಲಿ ಹೊಂಡಗುಂಡಿಗಳು ಬಿದ್ದು ಗತ ವೈಭವದ ಸಾಕ್ಷಿಯಾಗಿ ಅಲ್ಲಲ್ಲಿ ಡಾಮರು ರಸ್ತೆಯ ಪಳೆಯುಳಿಕೆಗಳಷ್ಟೇ ಉಳಿದಿವೆ. ಮುಖ್ಯ ರಸ್ತೆಗೆ ಹೊಂದಿ ಅಲ್ಲಲ್ಲಿ ಅಡ್ಡ ರಸ್ತೆಗಳೂ ಇವೆ. ಈ ಅಡ್ಡ ರಸ್ತೆ ನಗರದ ಪರಿಭಾಷೆಯ ಅಡ್ಡ ರಸ್ತೆಗಳಲ್ಲ. ಪ್ರಾಯಶಃ ಊರ ನಿವಾಸಿಗಳ ಚಲನವಲನದಿಂದ ಈ ರಸ್ತೆಗಳು ರೂಪುಗೊಂಡಿರಬಹುದು. ಇಂಥ ಹಳ್ಳಿಗಳಿಗೆ ಯೋಜನೆ ಎಂಬ ಪದ ಎಷ್ಟು ಮಾತ್ರಕ್ಕೂ ಅನ್ವಯಿಸುವಂತಹದಲ್ಲ. ಮೊದಲ ಪ್ರಾಶಸ್ತ್ಯ ಮನೆಗೆ; ಆಮೇಲೆ ರಸ್ತೆಯ ವಿಚಾರ. ಪರಿಣಾಮ: ರಸ್ತೆಗಳಿಗೆ ಸೂಕ್ತವಾದ ಸ್ಥಳವಿಲ್ಲ. ಆದ್ದರಿಂದಲೇ ಈ ಅಡ್ಡತಿಡ್ಡ ರಸ್ತೆಗಳು. ಈ ಅಡ್ಡರಸ್ತೆಗಳನ್ನು ಆಯಾ ರಸ್ತೆಯ ತಿರುವಿನಲ್ಲಿರುವ ಮೊದಲ ಮನೆಯ ಯಜಮಾನರ ಹೆಸರುಗಳಿಂದಲೇ ಗುರುತಿಸಬಹುದಾಗಿದೆ. ಉದಾಹರಣಾರ್ಥ, 'ಬುರುಡೆ ಪರಸಪ್ಪನ ಓಣಿ', 'ತಿಳ್ಳಿಕ್ಯಾತನ ಓಣಿ' ಇತ್ಯಾದಿ.

ಮುಖ್ಯ ರಸ್ತೆಯ ಸ್ವರೂಪವನ್ನು ಏನೆಂದು ಬಣ್ಣಿಸಲಿ? ಊರ ಉದ್ದಕ್ಕೆ ಅಡ್ಡಾಗಿ ಮಲಗಿದ ಈ ಮಹಾರಸ್ತೆಗೆ ಕಾಲುವೆ ತೋಡಿ ಅದೆಷ್ಟು ವರ್ಷಗಳು ಸಂದಿವೆಯೊ. ಬಚ್ಚಲ ನೀರು ರಸ್ತಗೆ ಹರಿದು ಅಲ್ಲಲ್ಲಿ ನೀರು ನಿಂತು ಮಲೆಯುತ್ತ ಸುತ್ತಣ ಪ್ರದೇಶಕ್ಕೆ 'ಸುಗಂಧ'ವನ್ನು ನೀಡುತ್ತಿದೆ. ಬೆಳಗಿನ ಜಾವ ಕಾಲುವೆಯ ಬದಿಗಳಲ್ಲಿ ಚಿಕ್ಕ ಮಕ್ಕಳು ಶೌಚಕ್ಕೆ ಕುಳಿತಿರುವ ದೃಶ್ಯ ಸಾಮಾನ್ಯ. ರಸ್ತೆಯ ಮೇಲೆ ಜನ ಹೈ ಜಂಪ್ ಮಾಡುತ್ತ ಸಾಗುವುದನ್ನು ನೋಡಿ ಯಾರೂ ಅಚ್ಚರಿ ಪಡಬೇಕಿಲ್ಲ. ಮನೆಯ ಕಸಕಡ್ಡಿಗಳ ವಿಲೇವಾರಿ ಇಲ್ಲಿ ಬಹಳ ಸುಲಭ. ಎತ್ತಿ ಅವನ್ನು ರಸ್ತೆಯ ಪಕ್ಕಕ್ಕೆ ಎಸೆದರಾಯಿತು. ಈ ವಿದ್ಯಮಾನ ಗಮನಕ್ಕೆ ತೆಗೆದುಕೊಳ್ಳದಷ್ಟು ಇಲ್ಲಿನ ಜನ ಅದಕ್ಕೆ ಒಗ್ಗಿಹೋಗಿದ್ದಾರೆ ಎಂದರೂ ತಪ್ಪಾಗದು. ಎಂದಾದರೂ ಓಣಿಯೊಂದರಲ್ಲಿ ಜಗಳವಾದರೆ ಅದು ಕಸದ ವಿಲೇವಾರಿಗೆ ಸಂಬಂಧಿಸಿದುದೆಂದೂ, ಅದು ಸಂಬಂಧಿಸಿದ ಜನರಲ್ಲಿ ಉದಿಸಿದ ತಾತ್ಕಾಲಿಕ ಎಚ್ಚರ ಎಂದೂ ಭಾವಿಸಬಹುದಾಗಿದೆ.

ಇದಕ್ಕೆ ತೀರ ವಿರುದ್ಧವಾಗಿದೆ ಚೇರ್ಮನ್ ಸಾಹೇಬರ ಮನೆಯ ಸ್ಥಿತಿ. ಮುಖ್ಯ